

ತರಗತಿಯಿಂದಲೇ ನಾರ್ಮಲ್ ಶಾಲೆಯಲ್ಲಿಯೇ ಕಲಿಯುತ್ತದೆ. ನಿಜಕ್ಕೂ ಇದೊಂದು ಪವಾಡ.

'ಮಕ್ಕಳಿಗೆ ಮಾತು ಕಲಿಸುವ ಶಿಕ್ಷಕರ ಕೊರತೆ ಬಹಳ ಇದೆ' ಎಂದು 'ವಾಗ್ದೇವಿ ಸಂಪರ್ಕ ನ್ಯೂನತೆಯುಳ್ಳವರ ಪುನಃಶ್ಚೇತನ ಕೇಂದ್ರ'ದ ಡಾ.ಶಾಂತಾ ರಾಧಾಕೃಷ್ಣ ಹೇಳುತ್ತಾರೆ. ಮಕ್ಕಳಿಗೆ ಮಾತು ಕಲಿಸುವ ಶಿಕ್ಷಕರನ್ನು ತಯಾರು ಮಾಡುವ ಹಾಗೂ ಸಾಮಾನ್ಯ ಶಾಲೆಗಳಲ್ಲಿ ವಿಶೇಷ ಮಕ್ಕಳ ಜೊತೆ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಅರಿತಿರುವ ಶಿಕ್ಷಕರ ಸಂಖ್ಯೆ ಹೆಚ್ಚು ಮಾಡುವ ಅಗತ್ಯ ಇದೆ ಎಂದೂ ಅವರು ಹೇಳುತ್ತಾರೆ. ವಿಶೇಷ ಮಕ್ಕಳಿಗೆ ನೀಡುವ ಶಿಕ್ಷಣವನ್ನೇ ಸಾಮಾನ್ಯ ಮಕ್ಕಳಿಗೂ ನೀಡಿದರೆ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯಾಗುತ್ತದೆ ಎಂದು ಅವರು ನಂಬಿದ್ದಾರೆ.

## ಛಲವಂತೆಯರು, ಮಹಾಮಾತೆಯರು!

ರಾಜ್ಯದ ಈಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ಹಿಂದೆ ಉಪಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಮೈಸೂರಿನ ಕಿವುಡು ಮಕ್ಕಳ ಮತ್ತು ತಾಯಂದಿರ ಶಾಲೆಗೆ ಭೇಟಿ ನೀಡಿದ್ದರು. ಕೇವಲ 2 ನಿಮಿಷ ಸಮಯ ನೀಡಿದ್ದರು. ಆದರೆ ಅಲ್ಲಿ ಮಕ್ಕಳು ಮಾತನಾಡುವುದನ್ನು, ನೃತ್ಯ ಮಾಡುವುದನ್ನು, ನಾಟಕ ಮಾಡುವುದನ್ನು ಕೇಳಿ, ನೋಡಿ ಎರಡು ತಾಸು ಅಲ್ಲಿಯೇ ಕಳೆದರು. ಆ ದಿನ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಕಿವುಡು ಮಕ್ಕಳೇ ನಿರ್ವಹಿಸಿದ್ದರು. ಮಕ್ಕಳನ್ನು ಆ ಮಟ್ಟಕ್ಕೆ ತರಲು ತಾಯಂದಿರು ಶ್ರಮಿಸಿದ್ದನ್ನು ನೋಡಿದ ಅವರು, 'ನೀವು ಮಹಾತಾಯಂದಿರು. ದೇವರು ನಿಮ್ಮ ಮಕ್ಕಳನ್ನು ಮೂಗರಾಗಲಿ ಎಂದು ಭೂಮಿಗೆ ಕಳಿಸಿದರೆ ನೀವು ಆ ದೇವರಿಗೇ ಸವಾಲು ಹಾಕಿ ನಮ್ಮ ಮಕ್ಕಳನ್ನು ಮೂಗರಾಗಲು ಬಿಡುವುದಿಲ್ಲ ಎಂದು ಶಪಥ ಮಾಡಿ ಅದರಲ್ಲಿ ಗೆದ್ದಿದ್ದೀರಿ. ನಿಮಗೆ ಶಿರಸಾಷ್ಟಾಂಗ ನಮಸ್ಕಾರಗಳು' ಎಂದು ಹೇಳಿದ್ದರು.

ಗಂಗಾವತಿ ಪ್ರಾಣೇಶ್ ತಮಾಷೆಗಾಗಿ 'ಮಹಿಳೆಯರು ಮಾತು ಹೆಚ್ಚು ಆಡುತ್ತಾರೆ. ಅದಕ್ಕಾಗಿಯೇ ಅವರು ಮಹಾಮಾತೆಯರು' ಎನ್ನುತ್ತಿದ್ದರು. ಮಾತು ಹೆಚ್ಚು ಆಡುವವರು ಮಾತೆಯರಲ್ಲ. ಮಾತು ಬಾರದ ಮಗುವಿಗೆ ಮಾತು ಕಲಿಸುವವರೇ ನಿಜವಾಗಿಯೂ ಮಹಾಮಾತೆಯರು.

ಅಂಗವಿಕಲರು ಇಷ್ಟೆಲ್ಲಾ ಸಾಧನೆ ಮಾಡುತ್ತಲೇ ಇದ್ದಾರೆ. ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಲೇ ಇದ್ದಾರೆ. ಆದರೆ ಸಮಾಜ ಅದಕ್ಕೆ ಇನ್ನೂ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ಭಾರತೀಯ ಸಮಾಜದಲ್ಲಿ ಅಂಗವಿಕಲರ ಬಗ್ಗೆ ಸಹಾನುಭೂತಿ ಇದೆ. ಆದರೆ ಅವರಿಗೆ ಸೂಕ್ತ ಸೌಲಭ್ಯ ಕಲ್ಪಿಸುವ ಮನಸ್ಸು ಇಲ್ಲ. ಅವರಿಗೆ ಉದ್ಯೋಗ ನೀಡುವಾಗಲೂ ನಾವು ಹಿಂದೆ ಮುಂದೆ ನೋಡುತ್ತೇವೆ. ಅಂಗವಿಕಲರು ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗಲೂ ಕಷ್ಟಪಡುತ್ತಾರೆ. ಯೋಗ್ಯ ವರನಿಗೆ ವಧು ಸಿಗುವುದಿಲ್ಲ, ವಧುವಿಗೆ ವರ ಸಿಗುವುದಿಲ್ಲ. ಉದ್ಯೋಗ ಕ್ಷೇತ್ರದಲ್ಲಿ ತಾವು ಅತ್ಯಂತ ಸಮರ್ಥರು ಎಂದು ಅವರು ಸಾಬೀತು ಮಾಡುತ್ತಲೇ ಇದ್ದರೂ ಉದ್ಯೋಗದಾತರು ಇನ್ನೂ ಅದನ್ನು ನಂಬುತ್ತಿಲ್ಲ. ಯಾಕೆ ರಿಸ್ಕ್ ಎಂದು ಬೇರೊಬ್ಬರನ್ನು ಆಯ್ಕೆ ಮಾಡುತ್ತಾರೆ ಎಂಬ ಆರೋಪ ಆಗಾಗ ಕೇಳುತ್ತಲೇ ಇರುತ್ತದೆ. ಸಮಾಜದ ಈ ರೋಗಕ್ಕೆ ವ್ಯಾಕ್ಸಿನ್ ಬೇಕಾಗಿದೆ.

**ಪ್ರತಿಕ್ರಿಯಿಸಿ: feedback@sudha.co.in**